ಸದಲಗಾ ಕ್ಷೇತ್ರದಲ್ಲಿ ವಿದ್ಯುತ್ ಅಭಾವ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವಾದ ಸದಲಗಾದಲ್ಲಿ ಕಳೆದ ಎರಡು ದಿನಗಳಿಂದ ವಿದ್ಯುತ್‌ಪೂರೈಕೆಯು ಇಲ್ಲವಾಗಿದೆ. ತಾರೀಖು, 7-8ರಂದು ವಿದ್ಯುತ್ ಪೂರೈಕೆ ಇಲ್ಲ. ಆ ದಿನಾಂಕಗಳಂದು ಸಾಕಷ್ಟು ಲಗ್ನಗಳು ಇದ್ದುವು. ಈ ಸದನ ಇರುವುದರಿಂದ ಆ ಲಗ್ನಕ್ಕೂ ಹೋಗಲಿಕ್ಕ ಆಗಲಿಲ್ಲ. ವಿದ್ಯುತ್ ಪೂರೈಕೆಯು ನಿಂತಿದ್ದ ಕಾರಣದಿಂದ ಕುಡಿಯುವ ನೀರಿನ ಪೂರೈಕೆ ಕೂಡ ಆಗಿಲ್ಲ. ಆದ್ದರಿಂದ ಈ ಅನಾನುಕೂಲತೆಗೆ ಕಾರಣ ಏನು ಎಂಬುದನ್ನು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : (ಭಾರಿ ನೀರಾವರಿ ಸಚಿವರು, ವಿದ್ಯುತ್ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, ಸದಲಗಾ ಮತ್ತು ಬೋರ್‌ಗಾಂವದಲ್ಲಿ 33 ಕೆ.ವಿ. ಸಬ್‌ಸ್ಟೇಷನ್ ಇದೆ. ಆ ಸಬ್‌ಸ್ಟೇಶನ್‌ನಲ್ಲಿ ಇನ್‌ಸ್ಯುಲೇಟರ್ಸ್ ಸಮಸ್ಯೆ ಬಂದು ಎರಡು ದಿನಗಳ ಕಾಲ ವಿದ್ಯುತ್ ಸರಬರಾಜು ವ್ಯತ್ಯಯವಾಗಿದೆ, ಸಬ್‌ಸ್ಟೇಶನ್ ಕೆಲಸ ಮಾಡಿಲ್ಲ. 8 ನೇ ತಾರೀಖಿನಂದು ರಿಪೇರಿ ಮಾಡಿದ್ದಾರೆ. ಸಂಜೆ ಮಳೆ ಬಂದು ಮತ್ತೆ ಇನ್‌ಸ್ಯುಲೇಟರ್ಸ್ ಕೆಟ್ಟು ಹೋಗಿದೆ. ಅಲ್ಲಿನ ಪ್ರತಿಯೊಂದು ಲೈನ್‌ಚೆಕ್ ಮಾಡಿ ಇದನ್ನು ಸರಿಪಡಿಸಬೇಕಾಗುತ್ತದೆ. ಈಗ ಎರಡು ಸಬ್‌ಸ್ಟೇಷನ್‌ಗಳು ಸರಿಯಾಗಿ ಕೆಲಸ ಮಾಡುತ್ತಿವೆ. ಇನ್‌ಸುಲೇಟರ್ಸ್ ಹಾಕಿದ್ದಾರೆ ಮತ್ತು ಕಂಬಗಳನ್ನು ಸರಿಪಡಿಸಿದ್ದಾರೆ. 8ನೇ ತಾರೀಖು ರಾತ್ರಿಯಿಂದ ಸದಲಗಾ ಮತ್ತು ಬೋರ್‌ಗಾಂ ದಲ್ಲಿ ವಿದ್ಯುತ್ ಸರಬರಾಜು ಸರಿಯಾಗಿ ಇದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆಟ್ಟಗುಡ್ಡ ಜಾಗದಲ್ಲಿ ಮನೆ ಕಟ್ಟಿಕೊಳ್ಳಲು ಅವಕಾಶ ನೀಡುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ದಯಮಾಡಿ ಮಾನ್ಯ ಅರಣ್ಯ ಸಚಿವರು ಮತ್ತು ಕಂದಾಯ ಸಚಿವರು ನನ್ನ ಈ ವಿಷಯಕ್ಕೆ ಸ್ಪಂದಿಸಬೇಕೆಂದು ಕೇಳಿಕೊಳ್ಳುತ್ತೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡ 80 ರಷ್ಟು ಅರಣ್ಯ ಭಾಗ ಇದೆ. ಇವೊತ್ತು ನಮ್ಮ ಜಿಲ್ಲೆಯ ಭಾಗದ ರೈತರು ಮನೆಯಿಂದ ಹೊರಗೆ ಕಾಲಿಡಬೇಕಾದರೆ ಅರಣ್ಯದಲ್ಲಿ ಇಡಬೇಕಾದ ಸ್ಥಿತಿ ಇದೆ. ಶೇಕಡಾ 10ರಷ್ಟು ಅಲ್ಲಿ ಬೆಟ್ಟಲ್ಯಾಂಡ್ ಇದೆ. ರೈತರ ಸಲುವಾಗಿ ರೈತರ ಕೃಷಿಗೆ ಉಪಯೋಗವಾಗುವುದಕ್ಕೆ ಶೇಕಡಾ 10ರಷ್ಟು ಬೆಟ್ಟಜಾಗವನ್ನು ಇಟ್ಟಿದ್ದಾರೆ. ಹಳ್ಳಿಗಳಲ್ಲಿ ಮನೆಗಳ ಸಂಖ್ಯೆಗಳು ಹೆಚ್ಚುತ್ತಿರುವುದರಿಂದ, ಮನೆಗಳಲ್ಲಿ ಡಿವೈಡ್ ಆಗುತ್ತಿರುವುದರಿಂದ ಹಿಸ್ಸೆ ಮತ್ತು ಅಣ್ಣ ತಮ್ಮಂದಿರು ಹೆಚ್ಚು ಬೇರೆಯಾಗುತ್ತಿರುವುದರಿಂದಾಗಿ, ಉತ್ತರ ಕನ್ನಡದ ರೈತರಿಗೆ ಮನೆಕಟ್ಟಿಕೊಳ್ಳಲು ಜಾಗವೆ ಇಲ್ಲದ ಸ್ಥಿತಿಯುಂಟಾಗಿದೆ. ನಾವು ಅರಣ್ಯದಲ್ಲಿ ಮನೆ ಕಟ್ಟಿಕೊಳ್ಳುವಂತಿಲ್ಲ, ನಮಗೆ ಸರಕಾರಿ ಜಾಗವಿಲ್ಲ, ಮಾಲಕೀ ಅಥವಾ ಗಾಂವ್‌ಠಾಣಾ ಜಾಗವೂ ಇಲ್ಲ. ನಮಗೆ ಇರುವುದು ಬೆಟ್ಟ ಮಾತ್ರ. ಆದರೆ ಕಳೆದ ಒಂದು ವರ್ಷದಿಂದ ನಮಗೆ ಅಲ್ಲಿನ ಬೆಟ್ಟದಲ್ಲಿ ಫಾರ್ಮ್‌ಹೌಸ್ ಕಟ್ಟುವುದಕ್ಕೂ ಕೂಡ ಅವಕಾಶವಿಲ್ಲ. ನಮಗೆ ಮನೆ ಕಟ್ಟಿಕೊಳ್ಳಲು ಬೇರೆ ಎಲ್ಲಿಯೂ ಜಾಗವಿಲ್ಲ. ಆದ್ದರಿಂದ ಬೆಟ್ಟಜಾಗದಲ್ಲಿ ಮನೆ ಕಟ್ಟಿಕೊಳ್ಳಲು ಸಂಬಂಧಪಟ್ಟವರಿಗೆ ಅವಕಾಶ ಮಾಡಿಕೊಡುವಂತೆ ಅರಣ್ಯಾಧಿಕಾರಿಯವರಿಗೆ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಇಂಥ ವಿಚಾರದಲ್ಲಿ ಮನೆಕಟ್ಟಿಕೊಳ್ಳಲು ಅವಕಾಶ ಕೊಡಬೇಕೆಂದು ಕೆಲವು ಪ್ರದೇಶಗಳಿಂದ ಪ್ರಸ್ತಾವನೆಗಳು ಬಂದಿವೆ. ಆದರೆ, ಪ್ರಸ್ತುತ ಜಾರಿಯಲ್ಲಿರುವ ಕಾನೂನಿನಂತೆ ರಾಜ್ಯಸರಕಾರಕ್ಕೆ ಅರಣ್ಯಭೂಮಿಯನ್ನು ಕೊಡುವುದಕ್ಕೆ ಅಧಿಕಾರವಿಲ್ಲ. ಅವಶ್ಯಕ ಎನಿಸುವ ಇಂಥ ಪ್ರಸ್ತಾವನೆಗಳನ್ನು ನಾವು ಅನುಮತಿಗಾಗಿ ಕೇಂದ್ರಸರಕಾರಕ್ಕೆ ಕಳುಹಿಸಿಕೊಡುತ್ತೇವೆ. ಮಾನ್ಯ ಸದಸ್ಯರು ಹೇಳಿದ ಬೆಟ್ಟಪ್ರದೇಶದಲ್ಲಿ ಮನೆಕಟ್ಟಿಕೊಳ್ಳಲು ಅವಕಾಶ ಮಾಡಿಕೊಡುವ ಪ್ರಸ್ತಾವನೆಯನ್ನು ನಾವು ಸೂಕ್ತ ರೀತಿಯಲ್ಲಿ ಕೇಂದ್ರ ಸರಕಾರಕ್ಕೆ ಕಳುಹಿಸಿಕೊಡುತ್ತೇವೆ.

ಡಾ|| ಎಂ. ಪಿ. ಕರ್ಕಿ : ಅಧ್ಯಕ್ಷರೇ ಈ ಬೆಟ್ಟ ಜಮೀನಿಗೆ ಸಂಬಂಧಪಟ್ಟಿದ್ದರ ಬಗ್ಗೆ ಈಗಾಗಲೇ ಸಚಿವ ಸಂಪುಟದ ಉಪಸಮಿತಿ ಒಂದು ನಿರ್ಣಯ ಕೊಟ್ಟಿದೆ. ಅದರ ಬಿಲ್ ಅನ್ನು ತಾವು ಮಂಡಿಸಬೇಕಾಗಿದೆ ಆದಷ್ಟು ಬೇಗ ಬೆಟ್ಟದಜಮೀನನ್ನು ರೈತರಿಗೆ ಹಸ್ತಾಂತರ ಮಾಡುವಂತಹ ಬಿಲ್ ಅನ್ನು ಈ ಅಧಿವೇಶನದಲ್ಲೇ ಮಂಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ : ಅವರ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ವಿತ್ತೀಯ ಕಾರ್ಯಕಲಾಪ.

1998-99ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ (ಮುಂದು) ಬೇಡಿಕೆ ಸಂಖ್ಯೆ (1,2,3,4,45,8)

+ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಅಧ್ಯಕ್ಷರೇ ಅಂತೂ ಕರೆದಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ, ಇವತ್ತು ಕೃಷಿ ತೋಟಗಾರಿಕೆ ಮತ್ತು ಪಶುಸಂಗೋಪನೆ ಇಲಾಖೆಗಳ ಮೇಲೆ ನಾನು ಮಾತನಾಡಲು ಬಯಸುತ್ತೇನೆ. ಒಂದು ಮಾತನ್ನು ಮೊದಲೇ ಹೇಳಬೇಕಾಗಿದೆ. ಕೃಷಿಸಚಿವರಾಗಿ ಮಾನ್ಯ ಬೈರೇಗೌಡರು ಬಂದ ಮೇಲೆ ಬಹುಶಃ ಕೆಲಸಗಳಾಗಿದೆ. ನಾವೇನೆ ಭಾಷಣ ಮಾಡಿದರೂ ಅವರೇನು ಈ ರೀತಿ ಹೇಳಿದರು ಎಂದು ತಿಳಿದುಕೊಳ್ಳಬಾರದು. ಆದರೂ ನಾವಿಲ್ಲಿ ನಿಂತು ನ್ಯೂನತೆಗಳನ್ನು ಎತ್ತಿ ತೋರಿಸಬೇಕಾದ್ದು ನಮ್ಮ ಕರ್ತವ್ಯ ಎಂದು ತಿಳಿದುಕೊಂಡು ನನ್ನ ಮಾತು ಪ್ರಾರಂಭ ಮಾಡುತ್ತೇನೆ. ಅಧ್ಯಕ್ಷರೇ, ತಮಗೆ ಗೊತ್ತು, ಇವತ್ತು ನಗರಗಳಲ್ಲಿ ಜನಸಾಂದ್ರತೆ ಜಾಸ್ತಿಯಾಗುತ್ತಿದೆ, ಗ್ರಾಮೀಣ ಪ್ರದೇಶದಲ್ಲಿ ತೀರಾ ಕಡಿಮೆಯಾಗುತ್ತಿದೆ. ನಾನು ಒಂದು ಕಡೆ ಓದುತ್ತಿದ್ದೆ, ಎರಡು ಸಾವಿರ ಇಸವಿ ವೇಳೆಗೆ ಭಾರತದ ಸ್ಥಿತಿ ಹೇಗಿರಬಹುದು ಅಂದರೆ ಬೆಂಗಳೂರು ನಗರದಲ್ಲಿ ಕೂಡ ನಾವು ಹಿಂದುಗಡೆ ಆಕ್ಸಿಜನ್ ಸಿಲಿಂಡರ್ ಇಟ್ಟುಕೊಂಡು ಉಸಿರಾಡಿಕೊಂಡು ಓಡಾಡುವಂತಹ ಕಾಲ ಬರುತ್ತದೆ. ಇವತ್ತು ಕುಡಿಯುವ ನೀರಿಗಾಗಿ ಬಾಟಲ್ ಇಟ್ಟುಕೊಂಡು ಹೋಗುತ್ತಿದ್ದೇವೆ. ಇದ್ಯಾಕೆ ಆಗುತ್ತದೆ ಎಂದು ಒಂದು ಕ್ಷಣ ಯೋಚನೆ ಮಾಡಿದೆ, ಹಳ್ಳಿಜೀವನ ಅಷ್ಟು ದುಸ್ತರವಾಗಿದೆ. ಅಲ್ಲಿ ಜೀವಿಸುವುದು ಅವಮಾನ ಎನ್ನುವ ಸ್ಥಿತಿಗೆ ಬಂದಿದೆ. ನಮಗೆ ರಕ್ಷಣೆ ಇಲ್ಲ ಎನ್ನುವ ಕಾಲ ಬಂದಿದೆ. ಸೂರ್ಯ ಹುಟ್ಟಿ ಸೂರ್ಯ ಮುಳುಗಿದರೆ ಸಂಬಳ ತೆಗೆದುಕೊಳ್ಳುವವನ ಎದುರಿಗೆ ಬದುಕುವುದು ನಾಚಿಕೆಗೇಡು ಎನ್ನುವ ಪ್ರಸಂಗ ನಿರ್ಮಾಣವಾಗುತ್ತದೆ. ಇದನ್ನು ಯಾರಾದರೂ ಸರಿ